ಸಾಕ್ಷಿಯನ್ನು ದಿಃ **24.06.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ವಿ.ವಿ. ವಕೀಲರಿಂದಃ-

1 ನೇ ಪ್ರತಿವಾದಿ ನನ್ನ ತಂದೆ. 2 ನೇ ಪ್ರತಿವಾದಿ ನನ್ನ ತಾಯಿ. 5 ನೇ ಪ್ರತಿವಾದಿ ನನ್ನ ತಂದೆಯ ತಂಗಿ. ವಾದಿ ನನ್ನ ಚಿಕ್ಕಪ್ಪ. ನನ್ನ ತಂದೆಯ ತಂದೆಯ ಹೆಸರು ಮಂಚನಾಯಕ ಎಂದರೆ ಸರಿಯಲ್ಲ, ಪೂಜಾರಿ ನಾಯಕ. ಅವರನ್ನು ಪೂಜಾರಿ ಕುಂಡನಾಯಕ ಎಂದು ಕರೆಯುತ್ತಾರೆ. ನನ್ನ ತಂದೆಗೆ ಸಣ್ಣ ಮಂಚನಾಯಕ ಎಂಬ ಇನ್ನೊಬ್ಬ ಸಹೋದರ ಇದ್ದರು. ಅವರ ಪತ್ನಿ ಚೌಡಮ್ಮ ಎಂದರೆ ಸರಿ. ಅವರಿಬ್ಬರೂ ಮಕ್ಕಳಿಲ್ಲದೇ ತೀರಿಕೊಂಡಿದ್ದಾರೆ. 1 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಾರೆ. ಈಗ 2-3 ವರ್ಷದಿಂದ ನನ್ನ ತಂದೆಗೆ ವ್ಯವಸಾಯ ಮಾಡಲು ಆಗುತ್ತಿಲ್ಲ. ನಾನೇ ಮಾಡುತ್ತೇನೆ. ಅವರು ಮನೆಯ ಹತ್ತಿರ ಕುಳಿತುಕೊಂಡು ನಿಧಾನವಾಗಿ ಮಾತನಾಡುವ ಸ್ಥಿತಿಯಲ್ಲಿದ್ದಾರೆ. 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಕುಳಿತುಕೊಂಡು ಸಾಕ್ಷಿ ಹೇಳಲು ತೊಂದರೆ ಇಲ್ಲ ಎಂದರೆ ಅವರಿಗೆ ಆಗುವುದಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಓದಿ ತಿಳಿದುಕೊಂಡಿಲ್ಲ. ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ವಕೀಲರು ಓದಿ ಹೇಳಿದ್ದಾರೆಯೇ ಎಂದರೆ ನಾನು ಕೇಳಿಲ್ಲ. ನಾನು ನನ್ನೊಬ್ಬನ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ತಂದೆಯ ಪರವಾಗಿಯೂ ನುಡಿಯುತ್ತಿದ್ದೇನೆ. ನಾನು ನನ್ನ ತಂದೆ-ತಾಯಿಯ ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ವಕೀಲರಿಗೆ ಹೇಳಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆ ರೀತಿ ಬರೆಸಿಲ್ಲ ಎಂದು ಬರೆಸಿ ಹಾಕುತ್ತೇನೆ. ನಾನು ಹುಟ್ಟುವ ಪೂರ್ವದಲ್ಲಿ ಏನೇನು ವ್ಯವಹಾರಗಳು ಆಗಿವೆ ಎಂದು ನನ್ನ ತಂದೆಗೆ ಮಾತ್ರ ಗೊತ್ತಿದೆ. ನನ್ನ ತಂದೆ ಹೇಳಿದಂತೆ ನಾನು ಮಾಡುತ್ತಿದ್ದೇನೆ. ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ನಿಜಾಂಶ ಗೊತ್ತಾಗುತ್ತದೆ ಎಂದರೆ, ಅವರು ಹೇಳಿದಂತೆಯೇ ನಾನು ಮಾಡುತ್ತಿದ್ದೇನೆ ಮತ್ತು ಅವರಿಗೆ ನ್ಯಾಯಾಲಯಕ್ಕೆ ಬರಲು ಸಾಧ್ಯವಿಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬರಲು ಶಕ್ತರಾಗಿದ್ದರೂ ಸಹ ಅವರು ಬಂದರೆ ನಿಜಾಂಶ ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾತ ಮತ್ತು ನನ್ನ ತಂದೆ ಎಲ್ಲಾ ಸೇರಿ ಹುಣಸೂರು ಸಿವಿಲ್ ನ್ಯಾಯಾಲಯದಲ್ಲಿ 2015ರಲ್ಲಿ ದಾವೆ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋಡಿದ್ದು, ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.